ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

**C.C.No.795/2026.**

ದಿನಾಂಕಃ**29.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಜಯಮ್ಮ | ಚಾಸಾ-3, ಪ್ರಾಸ-7 |
| ಗಂಡನ ಹೆಸರು | ಮಾದವ | |
| ವಯಸ್ಸು (ವರ್ಷಗಳಲ್ಲಿ) | 59 | |
| ಉದ್ಯೋಗ | ಟೈಲರಿಂಗ್ | |
| ವಾಸ | ಕೋಟೆ, ಕಡೂರು ಟೌನ್ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ 1, 2 ಗೊತ್ತು. ಈಗ ನೋಡುತ್ತಿರುವ ದಾಖಲೆಗಳಲ್ಲಿನ ಸಹಿ ನನ್ನದು, ಸದರಿ ದಾಖಲೆಯು

, 11 ಮತ್ತು ಆರೋಪಿತರು ಗೊತ್ತು. ಈಗ ನೋಡುತ್ತಿರುವ ನಿಪಿ 9, 10 ಮತ್ತು 12 ರಲ್ಲಿರುವ ಸಹಿ ನನ್ನದು, ಸಾಕ್ಷಿಯ ಸಹಿಯನ್ನು ನಿಪಿ9 ಬಿ, 10 ಬಿ, 12 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ದಿಃ11.03.2026 ರಂದು ಠಾಣೆಯಲ್ಲಿ ಮತ್ತು ಸ್ಥಳದಲ್ಲಿ ಹಾಕಿರುತ್ತೇನೆ. ಠಾಣೆಯಲ್ಲಿ ನಿಪಿ 10 ರ ಮಹಜರ್ ವೇಳೆ ಒಂದು ಜೊತೆ ಓಲೆ, 1 ಸರ, 1 ಉಂಗುರವನ್ನು ಅಮಾನತ್ತು ಪಡಿಸಿಕೊಂಡರು. ಅವುಗಳು ಸು.11 ಚಿಲ್ಲರೆ ಗ್ರಾಂ ಇತ್ತು, ಅದರ ತೂಕವನ್ನು ಚಾಸಾ 12 ರವರು ಮಾಡಿರುತ್ತಾರೆ. ಸದರಿ ಮಹಜರ್ ಅನ್ನು 11.30 ರಿಂದ 12 ಗಂಟೆಯ ವರೆಗೂ ಮಾಡಿರುತ್ತಾರೆ.

ಸದರಿ ಒಡವೆಗಳನ್ನು ಆರೋಪಿಗಳಿಂದ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ, ನಿಪಿ 8 ರಲ್ಲಿರುವ ಒಡವೆಗಳೆ ಅವುಗಳಾಗಿವೆ. ನಿಪಿ 11 ರಲ್ಲಿ ನಾನು, ಆರೋಪಿಗಳು, ಚಸಾ 4, 12 ಇದ್ದೇವೆ.

ನಂತರ ಅರಸುಮಕ್ಕಳ ಬೀದಿ, ಕೋಟೆ, ಕಡೂರು ಟೌನ್ ಇಲ್ಲಿಗೆ ಪೊಲೀಸರು ಕರೆದುಕೊಂಡು ಹೋಗಿದ್ದು ಆರೋಪಿತರು ತೋರಿಸಿದ ಸ್ಥಳದಲ್ಲಿ ನಿಪಿ 12 ರಂತೆ 1 ರಿಂದ

1.30 ರ ವರೆಗೂ ಮಹಜರ್ ಮಾಡಿರುತ್ತಾರೆ. ಸದರಿ ವೇಳೆಯಲ್ಲಿ ನಿಪಿ13, 14 ಫೋಟೋ ತೆಗೆಯಲಾಗಿದೆ. ಈಗ ವಿ.ಸಿ.ಮೂಲಕ ಹಾಜರಾಗಿರುವ ಆರೋಪಿಗಳೇ ಆ ದಿನ ಹಾಜರು ಇದ್ದ ಆರೋಪಿಗಳಾಗಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ**,** ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು**)**

<u>ಪಾಟೀಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಸದರಿ ಉಂಗುರ 2 ಗ್ರಾಂ, ಚೈನ್ 6.650 ಗ್ರಾಂ, 2 ಜೊತೆ ಓಲೆ 2.750 ಗ್ರಾಂ ಎಂದು ನನ್ನ ಮುಂದೆ ಅಂದಾಜು ಮಾಡಲಾಗಿತ್ತು ಎಂದರೆ ಸರಿ. ಸದರಿ ಒಡವೆಗಳನ್ನು ವಿಮಲಮ್ಮ ರವರ ಕಳ್ಳತನ ಮಾಡಿದ್ದ ಬಾಬ್ತು ಅಮಾನತ್ತು ಪಡಿಸಿಕೊಳ್ಳಲಾಗಿತ್ತು ಎಂದರೆ ಸರಿ.

<u>ಪಾಟೀಸವಾಲುಃ ಆರೋಪಿ ಪರ ಹೆಚ್ ಎನ್ ಎಸ್ ವಕೀಲರಿಂದ ಃ</u>

ಪೊಲೀಸರು ನೋಟೀಸ್ ಅನ್ನು ಮ.1.30 ಕ್ಕೆ ನೀಡಿದ್ದು ಸಂಜೆ ನನ್ನಿಂದ ಸಹಿ ಪಡೆದಿರುತ್ತಾರೆ. ಸದರಿ ಸಹಿಯನ್ನು ವಿಶ್ವನಾಥ ಸರ್ಕಲ್ ಬಳಿ ಮಾಡಿರುತ್ತೇನೆ. ನನ್ನೊಂದಿಗೆ ಚಾಸಾ 4 ಮತ್ತು ಇತರರು ಸಹಿ ಮಾಡಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಠಾಣೆಗೆ ಸು.11.30 ಕ್ಕೆ ಹೋಗಿರುತ್ತೇವೆ. ಸು.11.30 ರಿಂದ ½ ಗಂಟೆ ಕಾಲ ಮಹಜರ್ ಬರೆದಿರುತ್ತಾರೆ. ಸದರಿ ಮಹಜರಿನಲ್ಲಿ ಏನು ಬರೆದಿದೆ ಎಂದು ಮತ್ತು ಯಾವ ಒಡವೆ ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂದು ಹೇಳಲು ಸಾದ್ಯವಿಲ್ಲ ಎಂದರೆ ಸರಿಯಲ್ಲ. ಒಡವೆಯನ್ನು ಅಮಾನತ್ತು ಪಡಿಸಿಕೊಂಡಿದ್ದರು ಅದರ ತೂಕ ನನಗೆ ನೆನಪಿಲ್ಲ. ಮಹಜರ್ ಕಾಲದಲ್ಲಿ ಒಡವೆಗಳು ಠಾಣೆಯಲ್ಲಿ ಇತ್ತು. ಅವುಗಳನ್ನು ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿತ್ತು.

ನಿಪಿ 8, 11 ರಂತೆ ಸದರಿ ಒಡವೆಗಳು ಆರೋಗಳ ಕೈನಲ್ಲಿ ಒಡವೆಗಳು ಇಲ್ಲ ಎಂದರೆ ಸಾಕ್ಷಿಯು ಅಲ್ಲಿಯೇ ಕೊಟ್ಟಿದ್ದರು ಎನ್ನುತ್ತಾರೆ. ನಿಪಿ 11 ರಲ್ಲಿ ಒಡವೆ ತೂಕದ ಯಂತ್ರ ಇಲ್ಲ ಎಂದರೆ ಸಾಕ್ಷಿಯು ಇತ್ತು ಎನ್ನುತ್ತಾರೆ. ಮಹಜರ್ ಕಾಲಕ್ಕೆ ಆರೋಪಿಗಳು ನಾನು, ಚಾಸಾ 4, ಇನ್ನಿಬ್ಬರು ಪೊಲೀಸರು ಇದ್ದರು. ಮಹಜರ್ ಬರೆದ ಸ್ಥಳದ ಚೆಕ್ಕುಬಂದಿ ಗೊತ್ತಿಲ್ಲ. ಸದರಿ ಒಡವೆಗಳು ಯಾರಿಗೆ ಸೇರಿದ್ದು ಎಂದರೆ ಅವುಗಳು ವಿಮಲ್ಲಮ್ಮ ರವರಿಗೆ ಸೇರಿದ್ದಾಗಿರುತ್ತದೆ. ಮಹಜರ್ ಕಾಲಕ್ಕೆ ಚಾಸಾ 1 ರವರು ಇದ್ದರು. ಸ್ಥಳಕ್ಕೆ ಹೋದಾಗ ಸು.1.30 ಕ್ಕು ಹೆಚ್ಚಿನ ಸಮಯವಾಗಿತ್ತು. ಅಲ್ಲಿ ಯಾವುದೇ ಬರವಣಿಗೆಯಾಗಿಲ್ಲವೆಂದರೆ ಸರಿಯಲ್ಲ. ಸದರಿ ಮಹಜರಿನಲ್ಲಿ ಏನು ಬೆರದಿದೆ ಎಂದು ಸಂಪೂರ್ಣವಾಗಿ ನನಗೆ ಗೊತ್ತಿಲ್ಲ ಎಂದರೆ ಸರಿ. ನಂತರ ಠಾಣೆಗೆ ಕರೆದುಕೊಂಡು ಬಂದು ಟೈಪ್ ಮಾಡಿ ನಮ್ಮಗಳ ಸಹಿ ಪಡೆದರು ಎಂದರೆ ಸರಿ.

ಸ್ಥಳ ಮಹಜರಿನ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ನಿಪಿ 8 ರ ಒಡವೆ ಕಳ್ಳತನಕ್ಕು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲದಿದ್ದರು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಅಮಾನತ್ತು ಮಹಜರ್ ಮತ್ತು ಸ್ಥ,ಳ ಮಹಜರಿಗೆ ಹಾಜರಾಗಿಲ್ಲದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.